ಆ) ಎಲ್ಲಾ ನಗರಸಭೆ ಮತ್ತು ಪುರಸಭೆಗಳಿಗೆ ಕೆ.ಎಂ.ಎ.ಎಸ್. ಅಧಿಕಾರಿಗಳ ನೇಮಕ ಆಗಿದೆಯೇ?

ಇ) ಖಾಲಿ ಇರುವ ಹುದ್ದೆಗಳಿಗೆ ಕೆ.ಎಂ.ಎ.ಎಸ್. ಅಧಿಕಾರಿಗಳ ನೇಮಕವನ್ನು ಸರ್ಕಾರ ಮಾಡುವುದೇ?

ಈ) ಪೌರಸೇವಾ ನೌಕರರುಗಳಿಗೆ ಕೆ.ಎಂ.ಎ.ಎಸ್. ದರ್ಜೆ ಅಧಿಕಾರಿಗಳಾಗಿ ನೇಮಕ ಮಾಡುವ ಕ್ರಮ ಏನಾದರೂ ಸರ್ಕಾರಕ್ಕೆ ಇದೆಯೇ ಹಾಗೂ ಅದನ್ನು ಯಾವಾಗ ಮಾಡಲಾಗುವುದು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

ಅ)

1. 20 ನಗರಸಭೆಗಳು
2. 136 ಪುರಸಭೆಗಳು

ಒಟ್ಟು 156

ಆ) ಕೆಲವೊಂದಕ್ಕೆ ಇನ್ನೂ ಆಗಿರುವುದಿಲ್ಲ.

ಇ) ಖಾಲಿ ಇರುವ ಸ್ಥಾನಗಳನ್ನು ಬಡ್ತಿ ಹಾಗೂ ನೇರ ನೇಮಕಾತಿ ಮೂಲಕ ತುಂಬಲು ಕ್ರಮ ಕೈಗೊಳ್ಳಲಾಗುವುದು.

ಈ) ಪ್ರಸ್ತುತ ಖಾಲಿ ಇರುವ ಕೆ.ಎಂ.ಎ.ಎಸ್. ಹುದ್ದೆಗಳಲ್ಲಿ ಪೌರ ಸೇವಾ ನೌಕರರುಗಳಿಗೆ ಅಂದರೆ, ವ್ಯವಸ್ಥಾಪಕರು, ಕಂದಾಯಾಧಿಕಾರಿಗಳು, ಪ್ರಥಮ ದರ್ಜೆ ಸಹಾಯಕರು ಮತ್ತು ಆರೋಗ್ಯ ನಿರೀಕ್ಷಕರುಗಳಿಗೆ ಅವರ ಸ್ವಂತ ವೇತನ ಶ್ರೇಣಿಯಲ್ಲಿ ಕೆಲಸ ನಿರ್ವಹಿಸಲು ತಾತ್ಕಾಲಿಕವಾಗಿ ನೇಮಿಸಲಾಗಿದೆ. ಹಾಗೂ ಪೌರಸೇವಾ ನೌಕರರುಗಳಿಗೆ ಕೆ.ಎಂ.ಎ.ಎಸ್. ಅಧಿಕಾರಿಗಳಾಗಿ ಬಡ್ತಿ ಕೊಡುವ ಬಗ್ಗೆ ಸಿ. ಮತ್ತು ಆರ್. ನಿಯಮಾವಳಿಗೆ ತಿದ್ದುಪಡಿ ಮಾಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಬೀಜನಿಗಮದಿಂದ ಕಳಪೆ ಹತ್ತಿ ಬೀಜಗಳ ವಿತರಣೆ

1410 - ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಬೀಜ ನಿಗಮದಿಂದ ಈ ವರ್ಷ ಕಳಪೆ ಹತ್ತಿ ಬೀಜವನ್ನು ರೈತರಿಗೆ ಹಂಚಿಕೆ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಕಳಪೆ ಬೀಜ ಮಾರಾಟ ಮಾಡಿದವರ ಮೇಲೆ ತೆಗೆದುಕೊಂಡ ಕ್ರಮಗಳೇನು?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ಕೃಷಿ ಉತ್ಪನ್ನಗಳಿಗೆ ಬೆಲೆ ನಿಗದಿಪಡಿಸುವುದು.

1409 - ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೃಷಿ ಇಲಾಖೆ ಕಳೆದ ಮೂರು ವರ್ಷಗಳಿಂದ ಕೃಷಿ ವಸ್ತುಗಳ ಉತ್ಪಾದನೆ ಬೆಲೆ ನಿಗದಿ ಮಾಡಲು ಅನುಸರಿಸಿದ ವಿಧಾನಗಳಾವುವು?

ಆ) ಕೇಂದ್ರ ಸರ್ಕಾರ ಇತ್ತೀಚೆಗೆ ಮಾಡುತ್ತಿರುವ ಸುಧಾರಣೆಗಳ ಬಗ್ಗೆ ರಾಜ್ಯ ಸರ್ಕಾರವು ಕಾರ್ಯೋನ್ಮುಖವಾಗಿದೆಯೆ?

ಇ) ರಾಜ್ಯ ಸರ್ಕಾರವು ಹತ್ತಿ ಬೀಜ ಬೆಲೆ ಏರಿಕೆಯ ಬಗ್ಗೆ ಏನಾದರೂ ಆಲೋಚನೆ ಮಾಡಿದೆಯೆ?

ಈ) ಹಾಗಿದ್ದಲ್ಲಿ ಹತ್ತಿ ಬೀಜದ ಬೆಲೆಯನ್ನು ಎಷ್ಟೆಂದು ನಿಗದಿಪಡಿಸಲಾಗಿದೆ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು) :

ಅ) ರಾಜ್ಯ ಕೃಷಿ ಇಲಾಖೆಯಾಗಲಿ ಅಥವಾ ರಾಜ್ಯ ಸರ್ಕಾರವಾಗಲಿ ಕೃಷಿ ಉತ್ಪನ್ನಗಳ ಬೆಲೆಯನ್ನು ನಿಗದಿಪಡಿಸುತ್ತಿಲ್ಲ. ಕೃಷಿ ಉತ್ಪನ್ನಗಳ ಬೆಂಬಲ ಬೆಲೆಯನ್ನು ನಿಗದಿಪಡಿಸಲು ಕೇಂದ್ರ ಸರ್ಕಾರದ ಕೃಷಿ ಉತ್ಪನ್ನ ವೆಚ್ಚ ಮತ್ತು ಬೆಲೆ ಆಯೋಗವು ಕೇಳುವ ಮಾಹಿತಿಯನ್ನು ಸಲಹೆಯೊಂದಿಗೆ ರಾಜ್ಯ ಸರ್ಕಾರವು ಒದಗಿಸುತ್ತದೆ. ಕೇಂದ್ರ ಸರ್ಕಾರವು ಅಂತಿಮವಾಗಿ ಕೃಷಿ ಉತ್ಪನ್ನ ವೆಚ್ಚ ಮತ್ತು ಬೆಲೆ ಆಯೋಗವು ಮಾಡಿದ ಶಿಫಾರಸ್ಸಿನ ಆಧಾರದ ಮೇಲೆ ಮತ್ತು ರಾಜ್ಯ ಸರ್ಕಾರಗಳ ಶಿಫಾರಸ್ಸುಗಳ ಆಧಾರದ ಮೇಲೆ ಬೆಂಬಲ ಬೆಲೆಯನ್ನು ನಿರ್ಧಾರ ಮಾಡುವುದು.

ಆ) ಕೃಷಿ ಉತ್ಪಾದನೆ ಲಾಭದಾಯಕವಾಗಿ ಮಾಡುವ ವಿಷಯದಲ್ಲಿ ಡಾ. ಸಿ.ಹೆಚ್. ಹನುಮಂತರಾವ್‌ರವರ ಅಧ್ಯಕ್ಷತೆಯಲ್ಲಿ ಮತ್ತು ಕೃಷಿಯನ್ನು ಕೈಗಾರಿಕೆ ಎಂದು ಪರಿಗಣಿಸುವ ವಿಷಯದಲ್ಲಿ ಶ್ರೀ ಭಾನುಪ್ರತಾಪ್‌ಸಿಂಹರವರ ಅಧ್ಯಕ್ಷತೆಯಲ್ಲಿ ಕೇಂದ್ರ ಸರ್ಕಾರವು ಪರಿಣಿತರ ಸಮಿತಿಗಳನ್ನು ರಚಿಸಿದೆ. ಈ ಸಮಿತಿಗಳು ಮಾಡಿದ ಶಿಫಾರಸ್ಸುಗಳು ರಾಜ್ಯ ಸರ್ಕಾರಕ್ಕೆ ಇನ್ನೂ ಬಂದಿರುವುದಿಲ್ಲ.

ಇ) ಹೌದು.

ಈ) ಮುಂಗಾರು 1990 ರಲ್ಲಿ ಕರ್ನಾಟಕ ರಾಜ್ಯ ಬೀಜ ನಿಗಮ ಬೆಳೆದ ಸಂಸ್ಕರಣೆ ಹತ್ತಿ ಪ್ರಮಾಣಿತ ಬೀಜಗಳಿಗೆ ರೂ. 13,500ನ್ನು ಪ್ರತಿ ಕ್ವಿಂಟಾಲ್‌ಗೆ ನಿಗದಿಪಡಿಸಿದೆ.

ಪುರಸಭಾ ನೌಕರರ ಪೆನ್‌ಷನ್ ಪ್ರಕರಣ ಇತ್ಯರ್ಥದ ಕುರಿತು

1445 - ಶ್ರೀ ಗೋಪಾಲ ಮುಕುಂದ ಕಾನಡೆ (ಸಿರ್ಸಿ) : ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ರಾಜ್ಯದಲ್ಲಿ 1973ರಿಂದ ಟೌನ್ ಪಂಚಾಯಿತಿಗಳನ್ನು ಸರ್ಕಾರ ಪುರಸಭೆಗಳನ್ನಾಗಿ ಪರಿವರ್ತಿಸಲಾಗಿದೆಯೇ? ಹಾಗಿದ್ದಲ್ಲಿ ಆವುಗಳ ಸಂಖ್ಯೆ ಎಷ್ಟು?

2) ಈ ರೀತಿಯ ಪುರಸಭೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ನೌಕರರು ಸರ್ಕಾರಿ ಅಥವಾ ಖಾಸಗೀ ನೌಕರರೇ?

3) ಈ ನೌಕರರ ನಿವೃತ್ತಿ ಪ್ರಕರಣ ಇತ್ಯರ್ಥಪಡಿಸುವಲ್ಲಿ ಸರ್ಕಾರದ ಅಧಿಸೂಚನೆ ಇಲ್ಲದಿರುವ ಕುರಿತು ಉಂಟಾದ ತೊಂದರೆ ಸರ್ಕಾರದ ಗಮನಕ್ಕೆ ಬಂದಿದೆಯೇ?

4) ಈ ಕುರಿತು ಸರ್ಕಾರದಿಂದ ಪೂರ್ವಾನ್ವಯ ಮಂಜೂರು ಆದೇಶ ಹೊರಡಿಸಲು ಕೋರಿ ಉತ್ತರ ಕನ್ನಡ ಜಿಲ್ಲಾ ಸಿದ್ದಾಪುರ ಪುರಸಭಾ ನೌಕರರ ಸಂಘವು ದಿನಾಂಕ 13-12-90ಕ್ಕೆ ಸರ್ಕಾರವನ್ನು ವಿನಂತಿಸಿಕೊಂಡಿದ್ದು ಈ ಕುರಿತು ಈವರೆಗೆ ಏನು ಕ್ರಮ ಕೈಗೊಳ್ಳದಿರಲು ಕಾರಣವೇನು?

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) :

1) ಹೌದು. 49

2) ಪುರಸಭಾ ನೌಕರರು.

3) ಹೌದು.

4) ಪರಿಶೀಲನೆಯಲ್ಲಿದೆ.